## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-184 ರಲ್ಲಿ ಘೋಷಿಸಿರುವಂತೆ **'50 ಸಂಖ್ಯಾಬಲವುಳ್ಳ 50 ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾರಂಭಿಸಲು"** ಸರ್ಕಾರದ ಮಂಜೂರಾತಿ ನೀಡುವ ಬಗ್ಗೆ.

**ಓದಲಾಗಿದೆ:**

1. 2024-25ನೇ ಸಾಲಿನ ಜುಲೈ ಆಯವ್ಯಯ ಭಾಷಣ ಕಂಡಿಕೆ ಸಂಖ್ಯೆ-184.
2. ಅಲ್ಪಸಂಖ್ಯಾತರ ನಿರ್ದೇಶನಾಲಯದ ಇ-ಕಚೇರಿ ಕಡತ ಸಂಖ್ಯೆ: DOM/DEVP/MAMS /6/2024 ಮತ್ತು DOM/DEVP/MDRS/10/2024-Dev Sec-Part(2) & DOM/DEVP/MDRS/10/2024-Dev Sec-Part(3)

** ** **

**ಪ್ರಸ್ತಾವನೆ:**

ಮೇಲೆ ಓದಲಾದ (1) ರ 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ (184) ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿರುತ್ತದೆ.

**'50 ಸಂಖ್ಯಾಬಲವುಳ್ಳ 50 ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾರಂಭಿಸಲಾಗುವುದು "**

ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡುವ ಮೂಲಕ ಅವರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಪ್ರಸಕ್ತ ಸಾಲಿನ ಆಯವ್ಯಯ ಭಾಷಣದ ಮೇಲಿನ ಘೋಷಣೆಯಂತೆ ಪ್ರಸಕ್ತ ಸಾಲಿನಲ್ಲಿ 50 ಸಂಖ್ಯಾಬಲದ 50 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಹೊಸದಾಗಿ ಮಂಜೂರು ಮಾಡಿ ಪ್ರಾರಂಭಿಸಲು ಅಗತ್ಯ ಹುದ್ದೆಗಳನ್ನು ಸೃಜಿಸಿ, ಸದರಿ ಖಾಯಂ ಹುದ್ದೆಗಳು ಭರ್ತಿಯಾಗುವವರೆಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಮಾರ್ಗಸೂಚಿಗಳನ್ವಯ ಅತಿಥಿ ಶಿಕ್ಷಕರುಗಳನ್ನು ಹಾಗೂ ಉಳಿದ ಇತರೆ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿ ನಿರ್ವಹಿಸಲು ಅನುಮತಿ ನೀಡುವಂತೆ ಹಾಗೂ ಹೊಸದಾಗಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಅಲ್ಪಸಂಖ್ಯಾತ ಸಮುದಾಯದ ಜನಸಂಖ್ಯೆ, ಜನಪ್ರತಿನಿಧಿಗಳ ಬೇಡಿಕೆ, ಜಿಲ್ಲಾ ಕಛೇರಿಗಳ ವರದಿ ಹಾಗೂ ಇತರೆ ಅಂಶಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ಗಣನೆಗೆ ತೆಗೆದುಕೊಂಡು ಹಾಗೂ ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳ ಜೊತೆ ಚರ್ಚಿಸಿ ಅಂತಿಮವಾಗಿ ಸ್ಥಳಾವಕಾಶ ಲಭ್ಯವಿರುವ 25 ಸ್ಥಳಗಳಲ್ಲಿ ಹೊಸ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಬಹುದಾಗಿರುತ್ತದೆ. ಅಲ್ಲದೇ ಉಳಿದ 25 ಹೊಸ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು 2025-26ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿ, 2024-25ನೇ ಸಾಲಿಗೆ ರಾಜ್ಯದಲ್ಲಿನ 25 ಸ್ಥಳಗಳಲ್ಲಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಸೂಕ್ತ ಸರ್ಕಾರಿ ಆದೇಶವನ್ನು ಹೊರಡಿಸಲು ಕೋರಿ ಮೇಲೆ ಓದಲಾದ (2)ರಲ್ಲಿನ ಏಕ ಕಡತದಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

...2.

Scanned with OKEN Scanner

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಎಂಡಬ್ಲ್ಯೂಡಿ 202 ಎಂಡಿಎಸ್ 2024 ದಿನಾಂಕ:23.08.2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-184 ರಲ್ಲಿನ ಘೋಷಣೆ ಹಿನ್ನೆಲೆಯಲ್ಲಿ 2024-25ನೇ ಸಾಲಿನಲ್ಲಿ 50 ಸಂಖ್ಯಾಬಲವುಳ್ಳ 25 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಹಾಗೂ 2025-26ನೇ ಸಾಲಿನಲ್ಲಿ 25 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಿದೆ ಹಾಗೂ ಕೆಳಕಂಡಂತೆ ವಿವಿಧ ವೃಂದದ ಒಟ್ಟು 500 ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ.

| ಕ್ರ. ಸಂ | ಹುದ್ದೆಯ ವಿವರ | ಆರ್ಥಿಕ ಇಲಾಖೆಯು ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ (ಪ್ರತಿ ಶಾಲೆಗೆ) | 2024-25ನೇ ಸಾಲಿನಲ್ಲಿ ಮೊದಲನೆ ವರ್ಷಕ್ಕೆ ಆರ್ಥಿಕ ಇಲಾಖೆಯು ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ (25 ಶಾಲೆಗಳಿಗೆ) | 2025-26ನೇ ಸಾಲಿನಲ್ಲಿ ಮೊದಲನೇ ವರ್ಷಕ್ಕೆ ಆರ್ಥಿಕ ಇಲಾಖೆಯು ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ (25 ಶಾಲೆಗಳಿಗೆ) | ಒಟ್ಟು 50 ಶಾಲೆಗಳಿಗೆ ಆರ್ಥಿಕ ಇಲಾಖೆಯು ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|---|---|---|
| 1 | ಪ್ರಾಂಶುಪಾಲರು | 01 | 25 | 25 | 50 | ನಿಯೋಜನೆ |
| 2 | ಕನ್ನಡ ಭಾಷಾ ಶಿಕ್ಷಕರು | 01 | 25 | 25 | 50 | ಹೊರಗುತ್ತಿಗೆ ಆಧಾರದ ಮೇಲೆ |
| 3 | ಆಂಗ್ಲ ಭಾಷಾ ಶಿಕ್ಷಕರು | 01 | 25 | 25 | 50 | |
| 4 | ಉರ್ದು ಭಾಷಾ ಶಿಕ್ಷಕರು | 01 | 25 | 25 | 50 | |
| 5 | ಗಣಿತ ಶಿಕ್ಷಕರು | 01 | 25 | 25 | 50 | |
| 6 | ಸಮಾಜ ವಿಜ್ಞಾನ ಶಿಕ್ಷಕರು | 01 | 25 | 25 | 50 | |
| 7 | ವಸತಿ ನಿಲಯ ಮೇಲ್ವಿಚಾರಕರು | 01 | 25 | 25 | 50 | ನಿಯೋಜನೆ |
| 8 | ಅಡುಗೆಯವರು | 01 | 25 | 25 | 50 | ಹೊರಗುತ್ತಿಗೆ ಆಧಾರದ ಮೇಲೆ |
| 9 | ಅಡುಗೆ ಸಹಾಯಕರು | 01 | 25 | 25 | 50 | |
| 10 | ಗ್ರೂಪ್-ಡಿ | 01 | 25 | 25 | 50 | |
| | **ಒಟ್ಟು** | **10** | **250** | **250** | **500** | - |

2024-25ನೇ ಸಾಲಿನಲ್ಲಿ ಈ ಆದೇಶದ ಅನುಬಂಧದಲ್ಲಿ ತಿಳಿಸಿರುವ ಸ್ಥಳಗಳಲ್ಲಿ 25 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸತಕ್ಕದ್ದು ಹಾಗೂ 2025-26ನೇ ಸಾಲಿನಲ್ಲಿ 25 ಮೊರಾರ್ಜಿ ದೇಸಾಯಿ ಶಾಲೆಗಳನ್ನು ಪ್ರಾರಂಭಿಸಲು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಕಾರ್ಯಕ್ರಮಕ್ಕಾಗಿ ತಗಲುವ ವೆಚ್ಚವನ್ನು ಪ್ರಸಕ್ತ ಸಾಲಿನ ಆಯವ್ಯದ ಲೆಕ್ಕಶೀರ್ಷಿಕೆ:2225-04-277-0-10 ಅಲ್ಪಸಂಖ್ಯಾತರ ವಸತಿ ಶಾಲೆಗಳು ರಡಿ ಭರಿಸತಕ್ಕದ್ದು.

...3.

Scanned with OKEN Scanner

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 339 ಎಫ್ ಆರ್ ಸಿ 2024 (1450133) ದಿ:10/08/2024 ಮತ್ತು ಆಇ/349/ವೆಚ್ಚ-3/2024(1402498) ದಿ:16 /08/2024 ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

23/8/2024
(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್
ಮತ್ತು ವಕ್ಫ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ವಸಂತನಗರ, ಬೆಂಗಳೂರು.
3. ಎಲ್ಲಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ3&9) ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

Scanned with OKEN Scanner

**ಸರ್ಕಾರದ ಆದೇಶ ಸಂಖ್ಯೆ:ಎಂಡಬ್ಲ್ಯೂಡಿ 202 ಎಂಡಿಎಸ್ 2024 ದಿನಾಂಕ:23.08.2024ಕ್ಕೆ**

**ಅನುಬಂಧ.**

**2024-25 ನೇ ಸಾಲಿನ ಪ್ರಾರಂಭಿಸಬೇಕಾದ ಹೊಸ 25 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ವಿವರ.**

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಸ್ಥಳ |
|---|---|---|---|
| 1. | ಬೆಳಗಾವಿ | ಅಥಣಿ | ಅಥಣಿ |
| 2. | | ಗೋಕಾಕ | ಗೋಕಾಕ |
| 3. | | ಬೆಳಗಾವಿ | ಹಿರೇಬಾಗೇವಾಡಿ |
| 4. | ಬಾಗಲಕೋಟೆ | ಮುಧೋಳ | ಮುದೋಳ (ತಿಮ್ಮಾಪುರ) |
| 5. | ವಿಜಯಪುರ | ಬಬಲೇಶ್ವರ | ಬಬಲೇಶ್ವರ |
| 6. | | ಬಸವನ ಬಾಗೇವಾಡಿ | ಬಸವನ ಬಾಗೇವಾಡಿ |
| 7. | ಕಲಬುರಗಿ | ಯಡ್ರಾಮಿ | ಮಳ್ಳಿ, ಯಡ್ರಾಮಿ |
| 8. | | ಕಲಬುರಗಿ | ಕಲಬುರಗಿ ನಗರ |
| 9. | ಯಾದಗಿರಿ | ಸುರಪುರ | ಸುರಪುರ |
| 10. | ಬೀದರ್ | ಭಾಲ್ಕಿ | ಭಾಲ್ಕಿ |
| 11. | ರಾಯಚೂರು | ರಾಯಚೂರು | ರಾಯಚೂರು ಗ್ರಾಮೀಣ |
| 12. | | ದೇವದುರ್ಗ | ದೇವದುರ್ಗ |
| 13. | ಕೊಪ್ಪಳ | ಕನಕಗಿರಿ | ಕನಕಗಿರಿ |
| 14. | | ಕೊಪ್ಪಳ | ಹಿಟ್ನಾಳ್ |
| 15. | ಗದಗ | ರೋಣ | ರೋಣ |
| 16. | ಧಾರವಾಡ | ನವಲಗುಂದ | ನವಲಗುಂದ |
| 17. | | ಧಾರವಾಡ | ಧಾರವಾಡ ಗ್ರಾಮೀಣ |
| 18. | ಹಾವೇರಿ | ಹಾನಗಲ್ | ಹಾನಗಲ್ |
| 19. | | ಶಿಗ್ಗಾಂವ್ | ಸವಣೂರು |
| 20. | | ಹಿರೇಕೆರೂರು | ಹಿರೇಕೆರೂರು |
| 21. | ವಿಜಯನಗರ | ಹೊಸಪೇಟೆ | ಮರಿಯಮ್ಮನಹಳ್ಳಿ |
| 22. | ಬಳ್ಳಾರಿ | ಕುರಗೋಡು | ಕುರಗೋಡು |
| 23. | ದಾವಣಗೆರೆ | ಚನ್ನಗಿರಿ | ಬಸವಪಟ್ಟಣ |
| 24. | ಶಿವಮೊಗ್ಗ | ಸಾಗರ | ಸಾಗರ |
| 25. | ಉಡುಪಿ | ಬೈಂದೂರು | ಬೈಂದೂರು |

23/8/2024.

(ನಾಗರಾಜ)

ಸರ್ಕಾರದ ಅಧೀನ ಕಾರ್ಯದರ್ಶಿ

ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ

Scanned with OKEN Scanner